## ವಿಸ್ಮೃತಿಯ ಕತ್ತಲ ವೈತರಣಿಗೆ ಬಿದ್ದುಹೋದಳಾ ವನಿತೆ!

ಆ ರಾಜಧಾನಿಯು ದಿಗ್ವಿಜಯವನ್ನು ಪಡೆದು ಬರುವ ಚತುರಂಗ ಸೇನೆಯನ್ನು ಸ್ವಾಗತಿಸಲು ತುದಿಬೆರಳ ಮೇಲೆ ನಿಂತು ಕಾತರಿಸುವಂತೆ ನಲಿದು ಶೋಭಿಸುತ್ತಿತ್ತು. ಆ ಮಹಾನಗರ ಸುಂದರಿಯು ವಿಜಯಮಾಲೆಯನ್ನು ಕೈಯಲ್ಲಿ ಹಿಡಿದು ನಗೆಯ ಶುಭ್ರ ಅಲೆಗಳನ್ನು ಬೀರುತ್ತ, ಕಣ್ಮಿಂಚುಗಳ ನೋಟ ಬೀರುವಂತಿತ್ತು.

ಸೇನೆ ಬಂದುದನ್ನು ತಿಳಿದು, ಅದನ್ನು ಎದಿರುಗೊಳ್ಳಲು ನಗರ ನಗರವೇ ಉತ್ಸಾಹ ಗೊಂಡಿತು. ಅರಸ ಅರಸಿಯರು ಜೊತೆಗೂಡಿ, ಶುಭವಾದ್ಯ ಮೊಳಗುತ್ತಿರಲು ನವಕುಸುಮ ರಾಶಿಯು, ಧೂಪ ಧೂಮದ ಕಂಪು ಪರಿಮಳ ಆಗಸವನ್ನು ವ್ಯಾಪಿಸಿತು. ಹೀಗೆ ಸುಸ್ವಾಗತವನ್ನು ಬಯಸಲು ಇಡೀ ನಗರ ಸರ್ವ ಸನ್ನಾಹದಿಂದ ಕೂಡಿ ದುರ್ಗದ ಮಹಾದ್ವಾರ ಸನ್ನಿಧಿಗೆ ಹರಿದು ಬಂದಿತು.

ಹಿಮಧೂಳಿ ತಳ್ತ ಹೇಮಂತ ಕಮಲಿನಿಯಂತೆ, ಚಿತ್ರಾಂಗದೆ, ವಿಷಣ್ಣದೀನಾಸ್ಯೆ

ಸೇನೆಯಲ್ಲಿದ್ದವರು ತಂದೆತಾಯಿಯರಿಗೆ ನಮಸ್ಕರಿಸಿ, ಗುರುಗಳಿಗೆ ವಂದಿಸಿದರು. ಆಶೀರ್ವದಿಸಿದ ಇತರ ಬಂಧುಗಳನ್ನು ಪ್ರೀತಿ ಆದರಗಳಿಂದ ಮಾತನಾಡಿಸಿದರು. ಗೆಳತಿಯರನ್ನು ಒಲಿದ ತೋಳುಗಳಿಂದ ಅಪ್ಪಿಕೊಂಡರು. ನಮಸ್ಕರಿಸಿದ ವೀರ ಶೂರರನ್ನು ಒಳ್ಳೆಯ ಮಾತಿನಿಂದ ಉಪಚರಿಸಿದರು. ನಾಗರಿಕ ಸುಸಂಸ್ಕೃತ ಶ್ರೀಮಂತರನ್ನು ಗೌರವಿಸಿ ಬೀಳ್ಕೊಟ್ಟರು.

ಹೀಗೆ ಉತ್ಸವವು ಸುತ್ತುವರಿದಿರಲು ಚಿತ್ರಾಂಗದೆಯು ಹಿಮಧೂಳಿನಿಂದ ಆವರಿಸಿದ ಹೇಮಂತ ಋತುವಿನ ಕಮಲಿನಿಯಂತಿದ್ದಳು. ಅವಳು ನಿರುತ್ಸಾಹದಿಂದ ಕುಗ್ಗಿದ ದೀನಮುಖ ದಿಂದಿದ್ದಳು. ಚಿಂತಾಂತರಂಗದ ಅವಳು ನಗರದ ರಾಜಮಾರ್ಗದಲ್ಲಿ ನಡೆಯುತ್ತಿದ್ದ ಮೆರವಣಿಗೆಯ ಆಯಾಸವನ್ನು ಸಹಿಸಿಕೊಂಡಳು. ಅನಂತರ ಬಂಗಾರದ ಕಲಾಜಾಣ್ಮೆಯಿಂದ ರಚಿತವಾದ ವರ್ಷಕಾಲದ ಹಾಲು ನೊರೆಯ ಶರಮೇಘದಂತಹ ತನ್ನ ಭವ್ಯ ಅರಮನೆಯನ್ನು ಹೊಕ್ಕಳು.

ಜನರು ರಾಜಕುಮಾರಿಯ ವಿಚಿತ್ರ ನಡೆಯನ್ನು ಕಂಡು ತಮ್ಮತಮ್ಮಲ್ಲಿ ಹಲವು ರೀತಿಯಲ್ಲಿ ಮಾತಾಡಿಕೊಂಡರು. ತಮ್ಮತಮ್ಮ ಕಲ್ಪನೆಯ ಚೆಂಡುಗಳನ್ನು ಸಂಶಯ ಸಮುದ್ರದಲ್ಲಿ ಈಜಾಡಿಸಿಕೊಂಡರು.

ಚಿತ್ರಾಂಗದೆಯು – ಕಮಲವು ಅರಳಲು ಕುಮುದ ಅರಳುವುದನ್ನು ಹಾರೈಸುತ್ತ; ಕುಮುದವು ವಿಕಸಿಸಲು ಕಮಲದ ಸೊಗಸನ್ನು ಬಯಸುತ್ತಿದ್ದಳು. ಅವಳು ಹಗಲನ್ನು ಇರುಳಿನಿಂದ, ಮತ್ತೆ ಇರುಳನ್ನು ಹಗಲಿನಿಂದ ಮೀಟಿ ನೂಕುತ್ತ ಕಾತರದ ಹೃದಯವೇದನೆಯಲ್ಲಿ ಆರು ತಿಂಗಳುಗಳು ಕಳೆಯುವುದನ್ನೇ ಕಾಯುತ್ತಿದ್ದಳು.

ಮೊದಲಿನ ಹುಡುಗಾಟ ಅಳಿಯಿತು; ಪೌರುಷತೆ ಮಾಸಿತು. ಹೆಂಗಸಿನ ಸಹಜ ಲಜ್ಜೆ ಏಕಾಂತದ ಸಂತೋಷದೊಡನೆ ಅರಳಿತು. ಹಿಂದಿನ ಬಹಿರ್ಮುಖತೆಯು ಹಿಮ್ಮೆಟ್ಟಿ ಅಂತರ್ಮುಖತೆ ಗೋಚರಿಸಿತು. ಅವಳು ಸಖೀ ಜನರೊಡನೆ ಮಾತಾಡುತ್ತಿರಲಿಲ್ಲ. ವಿನೋದಗಳಲ್ಲಿ ಬೆರೆಯುತ್ತಿರಲಿಲ್ಲ. ಅವಳು ಪ್ರಿಯಕರನನ್ನು ಪ್ರತಿದಿನ ನಿಂತಲ್ಲಿ ಕುಂತಲ್ಲಿ, ತೆರೆದ ಕಣ್ಣು ಮುಚ್ಚದೆಯೆ; ಮುಚ್ಚಿರಲು ತೆರೆಯದೆ ಮೈಮರೆತು ಧ್ಯಾನಿಸುತ್ತಿದ್ದಳು!

ಗೆಳತಿಯರು ಹತ್ತಿರವಿದ್ದರೂ, ಅವರನ್ನು ಲೆಕ್ಕಿಸದೆ, ಚೇತನ ಮತ್ತು ಜಡಕ್ಕೆ ಭೇದವರಿಯದವಳಂತೆ ಹೂ ಗಿಡ ಬಳ್ಳಿಗಳೊಡನೆ ಮಾತಾಡುತ್ತಿದ್ದಳು. ಜಡಿಮಳೆ ಸುರಿಯುತ್ತ, ಹಗಲು ಇರುಳು ಮಂಕು ಕವಿದಂತೆ ಮಳೆಗಾಲದ ಮಬ್ಬು ಭೂಮಿಯನ್ನು ತಬ್ಬಿ, ವರ್ಷಋತು ಧಾತ್ರಿಯನ್ನು ತೋಯಿಸುತ್ತಿತ್ತು. ಆ ಲಲನೆಯು ಶರತ್ಪ್ರಸನ್ನತೆಗೆ ತಪವಿರುವ ನೆಲಹೆಣ್ಣಿನಂತೆ ಅರ್ಜುನನ ಪುನರಾಗಮನಕ್ಕೆ ಬೇಸರದ ಮಳೆಗಾಲದಂತಿದ್ದಳು.

ತಾಯ್ನಂದೆಯರ್ಬಂದು ಪುತ್ರಿಯಂ ನುಡಿಸಿ ಬೆದರಿದರವಳ ದುಃಸ್ಥಿತಿಗೆ

ಚಿತ್ರಾಂಗದೆ ಹೀಗಿರುವ ವಾರ್ತೆಯನ್ನು ಕೇಳಿ ಬಂದ ತಾಯಿ ತಂದೆಯರು ಪುತ್ರಿಯನ್ನು ಮಾತನಾಡಿಸಿ, ಅವಳ ದುಃಸ್ಥಿತಿಗೆ ಬೆದರಿದರು. ಮಣಿಪುರದ ಅರಸನು ಯೌವನದ ಜಾಡ್ಯಕ್ಕೆ ಮದುವೆ ಮದ್ದೆಂದು ತಿಳಿದನು. ಅದನ್ನು ತನ್ನ ರಾಣಿಯೊಡನೆ ಹೇಳಿ, ಮಗಳನ್ನು ಪರಿಣಯಕ್ಕೆ ಒಪ್ಪಿಸುವಂತೆ ಹೇಳಿ ಹೋದನು. ತಾಯಿಯ ಪ್ರೀತಿಯ ಒಳ್ಳೆಯ ನುಡಿಗಳು ಅವಳ ಕಿವಿಗೆ ಕಾಯಿಸಿದ ಸರಳಾಯಿತು.

ಚಿತ್ರಾಂಗದೆಯು ತನಗೆ ಮದುವೆಯು

